**ಪ್ರಧಾನ ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ ಇವರ ನ್ಯಾಯಾಲಯ ಸಾಃ ಗೋಕಾಕ**

ಸಾಕ್ಷಿಗೆ ದಿನಾಂಕಃ 06-02-2025 ರಂದು ಪ್ರಮಾಣ ವಚನ ಬೋಧಿಸಲಾಯಿತು

C.C.No.62/2023

DW-2

| | | |
|---|---|---|
| ಸಾಕ್ಷಿದಾರರ ಹೆಸರು | - | ರಮೇಶ ರಾಚಪ್ಪಾ ಭುಜಂಗನವರ |
| ವಯಸ್ಸು | - | 38 ವರ್ಷ |
| ಉದ್ಯೋಗ | - | ಅಗರಬತ್ತಿ ವ್ಯಾಪಾರ |
| ಸಾಕೀನ | - | ದೊಡವಾಡ , ಬೈಲಹೊಂಗಲ |

**ಮುಖ್ಯ ವಿಚಾರಣೆ: ಆರೋಪಿ ಪರ ವಕೀಲರಿಂದ:**

1) ಆರೋಪಿತಳು ನನಗೆ ಕಳೆದ 10 ವರ್ಷಗಳಿಂದ ಪರಿಚಯಸ್ಥಳಿರುತ್ತಾಳೆ. ನಾನು ಮತ್ತು ಆರೋಪಿತಳು ವಿ-ಕೇರ್ ಎನ್ನುವ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿರುವುದರಿಂದ ಒಬ್ಬರಿಗೊಬ್ಬರು ಪರಿಚಯಸ್ಥರಾಗಿರುತ್ತೇವೆ. ಪಿರ್ಯಾದುದಾರರ ಅಕ್ಕಿಸಾಗರ ಗ್ರಾಮದ ಪಂಚಾಯತಿ ಮೆಂಬರ ಆಗಿದ್ದು ಆರೋಪಿತಳು ಆಡಿಟ್ ಕೆಲಸ ಮಾಡುವುದಕ್ಕಾಗಿ ಪಿರ್ಯಾದುದಾರರ ಅಕ್ಕಿಸಾಗರ ಗ್ರಾಮಕ್ಕೆ ಹೋದಾಗ, ಪಿರ್ಯಾದುದಾರರಿಗೆ ಆರೋಪಿತಳು ವಿ-ಕೇರ್ ಆನಲೈನ್ ಶಿಕ್ಷಣದ ಬಗ್ಗೆ ತಿಳಿಸಿ ಸದಸ್ಯರಾಗಲು ಕೋರಿಕೊಂಡಿದ್ದು ಆಗ ಪಿರ್ಯಾದುದಾರರು ಒಪ್ಪಿ ವಿ-ಕೇರ್ ಶಿಕ್ಷಣ ಸಂಸ್ಥೆಗೆ ರೂ. 2,13,000/- ಹಣ ನೀಡಿದ್ದು ಅದರ ಭದ್ರತೆಗಾಗಿ ಆರೋಪಿಯ ಕಡೆಯಿಂದ ಪಿರ್ಯಾದುದಾರರು ಎರಡು ಖಾಲಿ ಚೆಕ್ಕುಗಳ ಮೇಲೆ ಸಹಿ ಪಡೆದುಕೊಂಡು ಹಣ ಕಟ್ಟಿದ್ದರು. ತದನಂತರ ಸದರಿ ವಿ-ಕೇರ್ ಶಿಕ್ಷಣ ಸಂಸ್ಥೆಯ ಸದಸ್ಯತ್ವ ನವೀಕರಣಕ್ಕಾಗಿ ಪಿರ್ಯಾದುದಾರರಿಗೆ ಆರೋಪಿತಳು ಹಣ ಕಟ್ಟಲು ತಿಳಿಸಿದಾಗ ಪಿರ್ಯಾದುದಾರರು ತನಗೆ ಹಣ ಕಟ್ಟಲು ಆಗುವುದಿಲ್ಲ ತಾನು ಈ ಮೊದಲು ಕಟ್ಟಿದ ರೂ. 2,13,000/- ಹಣ ಮರಳಿ

ಕೊಡಲು ಆರೋಪಿತಳಿಗೆ ಕೇಳಿದ್ದು ಹೀಗಾಗಿ ಆರೋಪಿತಳು ಪಿರ್ಯಾದುದಾರರಿಗೆ ರೂ. 2,04,000/- ಹಣವನ್ನು ತನ್ನ ಖಾತೆಯಿಂದ ವರ್ಗಾವಣೆ ಮಾಡಿದ್ದು ಉಳಿದ ರೂ. 9,000/- ಹಣವನ್ನು ನಾನು ಮತ್ತು ಆರೋಪಿತಳು ಪಿರ್ಯಾದುದಾರರ ಮನೆಗೆ ಹೋಗಿ ನೀಡಿರುತ್ತೇವೆ. ಪಿರ್ಯಾದುದಾರರಿಗೆ ನೀಡಬೇಕಾದ ರೂ. 2,13,000/- ಹಣವನ್ನು ಸಂಪೂರ್ಣ ನೀಡಿ ಆದ ನಂತರ ಆರೋಪಿತಳು ಪಿರ್ಯಾದುದಾರರ ಬಳಿ ಕೊಟ್ಟ ಎರಡು ಖಾಲಿ ಚೆಕ್ಕುಗಳನ್ನು ಮರಳಿ ಕೊಡಲು ಕೋರಿಕೊಂಡಾಗ ಒಂದು ವಾರ ಬಿಟ್ಟು ಕೊಡುತ್ತೇನೆ ಎಂದು ಹೇಳಿ ಆರೋಪಿತಳ ಚೆಕ್ಕುಗಳನ್ನು ಮರಳಿ ಕೊಡದೆ ಸದರಿ ಚೆಕ್ಕುಗಳನ್ನು ದುರುಪಯೋಗ ಪಡಿಸಿಕೊಂಡು ಆರೋಪಿತಳ ವಿರುದ್ಧ ಪಿರ್ಯಾದುದಾರರು ಇದೊಂದು ಸುಳ್ಳು ಕೇಸು ಹಾಕಿರುವ ಸಂಗತಿ ಆರೋಪಿತಳು ನನಗೆ ತಿಳಿಸಿದ್ದಕ್ಕಾಗಿ ಗೊತ್ತಾಗಿರುತ್ತದೆ.

**ಪಾಟೀ ಸವಾಲುಃ** ಪಿರ್ಯಾದುದಾರರ ಪರ ವಕೀಲರು ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

(ರಾಜೀವ ಗೋಳಸಾರ)
ಪ್ರ.ದಿ.&ನ್ಯಾದಂ., ಗೋಕಾಕ.